ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಿನಾಂಕ:24-01-2022ರಂದು ಸಿ.ವಿ.ರಾಮನ್‌ನಗರ ಉಪ ವಿಭಾಗ,
ವಾರ್ಡ್ ಸಂಖ್ಯೆ:50, ಬೆನ್ನಿಗಾನಹಳ್ಳಿ ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ದಿನಾಂಕ:24-01-2021 ರಂದು ಬೆಳಗ್ಗೆ 10.30.00 ಗಂಟೆಗೆ ವಾರ್ಡ್-50 ಬೆನ್ನಿಗಾನಹಳ್ಳಿ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ಶ್ರೀ.ರಾಮಾಂಜನೇಯ, ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ದಕ್ಷಿಣ) ಹಾಗೂ ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಂಖ್ಯೆ:50, ಬೆನ್ನಿಗಾನಹಳ್ಳಿ ವಾರ್ಡ್ ಕಛೇರಿ, 2ನೇ ಮುಖ್ಯರಸ್ತೆ, ಕಸ್ತೂರಿನಗರ ಬೆಂಗಳೂರು-560043 ಇಲ್ಲಿ ಹಮ್ಮಿಕೊಳ್ಳಲಾಯಿತು. ಸದರಿ ಸಭೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತೆ ಇರುತ್ತದೆ.

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಆರ್.ಡಬ್ಲ್ಯೂ.ಎ**

1. ಶ್ರೀ.ವಿ.ಎಂ.ರಾಜಣ್ಣ ಸದಸ್ಯರು
2. ಶ್ರೀ.ಪಿ.ರಘುರಾಮ್ ರೆಡ್ಡಿ ಸದಸ್ಯರು
3. ಶ್ರೀ.ನಾಗರಾಜ್ ಸದಸ್ಯರು
4. ಶ್ರೀ.ಎನ್.ನಾಗೇಂದ್ರ ಸದಸ್ಯರು
5. ಶ್ರೀ.ಎಸ್.ಮುನೇಗೌಡ ಸದಸ್ಯರು
6. ಶ್ರೀ.ವೇಣುಗೋಪಾಲ್ ರೈ ಆರ್.ಡಬ್ಲ್ಯೂ.ಎ
7. ಶ್ರೀ.ರಮಾನಥ್ ರಾವ್ ಆರ್.ಡಬ್ಲ್ಯೂ.ಎ

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಮಟ್ಟದ ಅಧಿಕಾರಿ/ನೌಕರರು**

1. ಶ್ರೀ.ರಾಮಾಂಜನೇಯ, ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ದಕ್ಷಿಣ) ಹಾಗೂ ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ:50, ಬೆನ್ನಿಗಾನಹಳ್ಳಿ
2. ಶ್ರೀ.ನರಸಿಂಹಯ್ಯ.ಎನ್, ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ವಾರ್ಡ್ ಸಂಖ್ಯೆ:50, ಬೆನ್ನಿಗಾನಹಳ್ಳಿ
3. ಶ್ರೀ.ದುರ್ಗಾ ಪ್ರಸಾದ್ ಸಹಾಯಕ ಅಭಿಯಂತರರು ವಿದ್ಯುತ್
4. ಶ್ರೀಮತಿ.ಎಸ್.ತಿಲಗ ಕಿರಿಯ ಅಭಿಯಂತರರು, ಬೆಸ್ಕಾಂ
5. ಶ್ರೀ.ಲೋಹಿತ್.ಕೆ.ಪ್ರಕಾಶ್. ಕಿರಿಯ ಅಭಿಯಂತರರು, ಬೆಂಗಳೂರು ಜಲ ಮಂಡಳಿ,
6. ಶ್ರೀ.ಪ್ರಭುದಾಸ್, ಕಿರಿಯ ಆರೋಗ್ಯ ಪರಿವೀಕ್ಷಕರು
7. ಶ್ರೀ.ಹರಿಕೃಷ್ಣ.ಎಸ್.ಕೆ.ವಾರ್ಡ್ ಮಾರ್ಷಲ್
8. ಶ್ರೀ.ರಾಮಾಂಜನಪ್ಪ. ASI ಸಂಚಾರ ಪೋಲೀಸ್ ಠಾಣೆ, ಕೆ.ಆರ್.ಪುರ
9. ಶ್ರೀ.ಅರುಣ್.ಜಿ.ಎಲ್ PC-13177 ಜೆ.ಬಿ.ನಗರ ಸಂಚಾರ ಪೋಲೀಸ್ ಠಾಣೆ,
10. ಶ್ರೀ.ಗೋವಿಂದೇ ಗೌಡ, ಪರಿವೀಕ್ಷಕರು ತೋಟಗಾರಿಕೆ ಇಲಾಖೆ
11. ಶ್ರೀ.ಕುಮಾರ್, ಕಂದಾಯ ವಸೂಲಿಗಾರರು, ವಾರ್ಡ್ ಸಂಖ್ಯೆ:50

ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರಿಗೆ, ಸದಸ್ಯರಿಗೆ ಹಾಗೂ ವಿವಿಧ ಇಲಾಖೆಯ ಅಧಿಕಾರಿ/ನೌಕರರುಗಳಿಗೆ ಹಾಗೂ ಸಾರ್ವಜನಿಕರಿಗೆ ಸ್ವಾಗತ ಕೋರಿದರು. ಹಾಗೂ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ಹಾಗೂ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ಮಂಡಿಸಲು ಮಾನ್ಯ ಅಧ್ಯಕ್ಷರು ತಿಳಿಸಿ, ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯಲ್ಲಿ ಚರ್ಚಿಸಿದ ವಿಷಯಗಳು:-

| ಕ್ರ. ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| | **ಘನತ್ಯಾಜ್ಯ ನಿರ್ವಹಣೆ (SWM)** | |
| 1 | • ಹಸಿ ಕಸ ಮತ್ತು ಒಣ ಕಸ ಬೇರ್ಪಡಿಸುವ ಬಗ್ಗೆ.<br>• ಪ್ರಸ್ತುತ ಕಾರ್ಯನಿರ್ವಹಿಸುವ ಆಟೋ ಮತ್ತು ಕಾಂಪ್ಯಾಕ್ಟರ್‌ಗಳ ವಿವರ.<br>• ಮಸ್ಟರಿಂಗ್ ಕೇಂದ್ರದ ವಿವರ.<br>• ಜಿ.ಪಿ.ಎಸ್ ಮುಖಾಂತರ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಆಟೋ ಮತ್ತು ಕಾಂಪ್ಯಾಕ್ಟರ್‌ಗಳ ವಿವರ.<br>• ಒಣಕಸ ಭೇರ್ಪಡಿಸುವ ಗುತ್ತಿಗೆದಾರರ ವಿವರ<br>• ಖಾಲಿ ನಿವೇಶನಗಳಲ್ಲಿ ಹಾಕಲಾಗಿರುವ ಕಸ ವಿಂಗಡಣೆಯ ವಿವರ<br>• ಹೊರ ವರ್ತುಲ ರಸ್ತೆಯ ಸೇವಾ ರಸ್ತೆಯಲ್ಲಿ ಕೋಳಿ ಮಾಂಸದ ತ್ಯಾಜ್ಯವನ್ನು ಹಾಕುವವರ ಬಗ್ಗೆ ಕೈಗೊಂಡಿರುವ ಕ್ರಮದ ವಿವರ<br>• ಮಾರ್ಷಲ್ ಜೊತೆಗೂಡಿ ನಿರ್ವಹಿಸಿರುವ ಕಾರ್ಯಗಳ ಬಗ್ಗೆ<br>ಈ ಎಲ್ಲಾ ವಿವರಗಳನ್ನು ಸಭೆಯಲ್ಲಿ ಸದಸ್ಯರ ಹಾಗೂ ಸಾರ್ವಜನಿಕರಿಂದ ಪ್ರಸ್ತಾಪವಾಗಿರುವ ದೂರುಗಳಿಗೆ ಸ್ಪಂದಿಸಿರುವ ಬಗ್ಗೆ ನೋಡೆಲ್ ಅಧಿಕಾರಿಗಳು ವಿವರಗಳನ್ನು ನೀಡಲು ಸಭೆಯಲ್ಲಿರುವ ಕಿರಿಯ ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು. | **Junior/Senior Health Inspector** |
| | **ಕಾಮಗಾರಿ ಇಲಾಖೆ (Engineering)** | |
| 1 | • ಕಸ್ತೂರಿನಗರದ 2ನೇ ಮುಖ್ಯರಸ್ತೆಯಲ್ಲಿ ಬೀದಿ ಬದಿ ವ್ಯಾಪರಿಗಳಿಂದ ಪಾದಚಾರಿ ಮಾರ್ಗವನ್ನು ಒತ್ತುವರಿ ತೆರವು ಕಾರ್ಯಾಚರಣೆಯ ಬಗ್ಗೆ.<br>• ರಸ್ತೆಗುಂಡಿಗಳನ್ನು ಮುಚ್ಚುವ ಬಗ್ಗೆ<br>• ಸಿ.ಸಿ.ಕ್ಯಾಮರಾಗಳನ್ನು ಅಳವಡಿಸುವ ಬಗ್ಗೆ<br>ವಿವರಗಳನ್ನು ಸಭೆಯಲ್ಲಿ ಕೋರಿದರು. | **Assistant Engineer-BBMP** |
| | **ಕಂದಾಯ ಇಲಾಖೆ(Revenue Department)** | |
| 1 | ವಾರ್ಡ್ ವ್ಯಾಪಿಯಲ್ಲಿ ಒಟ್ಟು ಎಷ್ಟು ಕಂದಾಯ ಪಾವತಿಯಾಗಿರುತ್ತದೆ. ಎಷ್ಟು ಬಾಕಿ ಇರುತ್ತದೆ ಎಂದು ವರದಿಯನ್ನು ನೀಡಲು ಸಭೆಯಲ್ಲಿ ತಿಳಿಸಲು ತಿಳಿಸಿದರು. ಇದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಮುಂದಿನ ಸಭೆಯಲ್ಲಿ ಸಲ್ಲಿಸಲು ತಿಳಿಸಿದರು. | ಕಂದಾಯ ಅಧಿಕಾರಿಗಳು |
| | **ಬೆಂಗಳೂರು ಜಲ ಮಂಡಳಿ (BWSSB)** | |
| 1 | ಸದಾನಂದನಗರ ಮತ್ತು ಕೃಷ್ಣಯ್ಯನ ಪಾಳ್ಯ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ದುರಸ್ಥಿ ಕಾರ್ಯಗೊಳಿಸಲು ಸ್ಥಳೀಯ ಸದಸ್ಯರು ಕೋರಿದರು. | **Assistant Engineer-BWSSB** |
| 2 | ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ್ನು ಸಮರ್ಪಕವಾಗಿ ಸರಬರಾಜು ಮಾಡಲು ಸಂಬಂಧಪಟ್ಟ ಅಭಿಯಂತರರು ಕ್ರಮ ಕೈಗೊಳ್ಳಲು ಕೋರಿದರು. | **Assistant Engineer-BWSSB** |
| | **ತೋಟಗಾರಿಕಾ ಇಲಾಖೆ (Horticulture Dept)** | |
| | **ಬೃಹತ್ ನೀರುಗಾಲುವೆ (SWD Dept)** | |
| 1 | ರೈಲ್ವೇ ಸಮಾನಂತರ ರಸ್ತೆಯಲ್ಲಿ ಮಳೆ ನೀರು ಸರಾಗವಾಗಿ ಹೋಗದೆ ರಸ್ತೆಯ ಮೇಲೆ ನಿಲ್ಲುತ್ತಿರುವುದರಿಂದ ಬೃಹತ್ ನೀರುಗಾಲುವೆಯ ಮತ್ತು ರೈಲ್ವೇ ಸೇತುವೆ ಕೆಳಭಾಗದ ಹೂಳು ತೆಗೆದು ಹೂಳು ತೆಗೆದು ನೀರು ಸರಾಗವಾಗಿ ಹೋಗುವಂತೆ ಕ್ರಮ ವಹಿಸಬೇಕೆಂದು ಸ್ಥಳೀಯ ಸದಸ್ಯರು ಕೋರಿದರು. | ಸಹಾಯಕ ಅಭಿಯಂತರರು ಬೃಹತ್ ನೀರುಗಾಲುವೆ |

| | | |
|---|---|---|
| 2 | ಕೆಲವು ಭಾಗಗಳಲ್ಲಿ ಮನೆಯ ಒಳಚರಂಡಿಯ ಸಂಪರ್ಕವನ್ನು ನೇರವಾಗಿ ಬೃಹತ್ ನೀರುಗಾಲುವೆ ಬಿಟ್ಟಿರುವುದು ಕಂಡುಬಂದಿರುತ್ತದೆ. ಅಂತಹ ಕಟ್ಟಡಗಳ ವಿರುದ್ಧ ಮಾಲೀಕರುಗಳಿಗೆ ನೋಟೀಸು ನೀಡಿ ಕ್ರಮಕೈಗೊಳ್ಳಲು ಮಾನ್ಯ ಅಧ್ಯಕ್ಷರು ತಿಳಿಸಿದರು. | ಸಹಾಯಕ ಅಭಿಯಂತರರು ಬೃಹತ್ ನೀರುಗಾಲುವೆ/ಬೆಂಗಳೂರು ಜಲ ಮಂಡಳಿ |
| | ಬೆಸ್ಕಾಂ ಇಲಾಖೆ (BESCOM) | |
| 1 | ಬೆಸ್ಕಾಂ ಹಾಗೂ ಎಲ್.ಎನ್.ಟಿ ಸಂಸ್ಥೆ ರವರು ಜಂಟಿಯಾಗಿ ಕೇಬಲ್ ಅಳವಡಿಸಲು ವಾರ್ಡ್ ವ್ಯಾಪ್ತಿಯಲ್ಲಿ ಇತ್ತೀಚೆಗೆ ರಸ್ತೆಗಳನ್ನು ಕತ್ತರಿಸಿ ಅಗೆಯಲಾಗಿದ್ದು, ಇದಕ್ಕೆ ಸೂಕ್ತ ಪಾಲಿಕೆಯಿಂದ ಪರವಾನಗಿಯನ್ನು ಪಡೆಯದೇ ಅನಧಿಕೃತವಾಗಿ ರಸ್ತೆಗಳನ್ನು ಅಗೆದಿರುವ ಬಗ್ಗೆ ದೂರನ್ನು ದಾಖಲಿಸಿ, ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ವಹಿಸಲು(ಬಿ.ಬಿ.ಎಂಪಿಯಿಂದ ಕ್ರಮ ವಹಿಸಲು) ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಸಭೆಯಲ್ಲಿ ಕೋರಿದರು. | ಸಹಾಯಕ ಅಭಿಯಂತರರು ಬೆಸ್ಕಾಂ |
| | ಸಂಚಾರ ಪೊಲೀಸ್ ಇಲಾಖೆ TRAFIC POLICE DEPARTMENT | |
| 1 | • ಕಸ್ತೂರಿನಗರ ಗ್ರೀನ್ ವ್ಯೂವ್ ಪಾರ್ಕ್ ಮತ್ತು 1ನೇ ಮುಖ್ಯರಸ್ತೆಯ ಮಾರುತಿ ಬಾರ್ & ರೆಸ್ಟೋರೆಂಟ್ ಹತ್ತಿರ ಹೊಸದಾಗಿ ಸಿಗ್ನಲ್‌ಗಳನ್ನು ಅಳವಡಿಸುವ ಬಗ್ಗೆ<br>• ಜಲವಾಯು ಟವರ್ ರಸ್ತೆ ಹಾಗೂ ಪ್ರೆಸಿಡೆನ್ಸಿ ಶಾಲೆಯ ಹತ್ತಿರ ಅನಧಿಕೃತವಾಗಿ ವಾಹನ ನಿಲುಗಡೆಯನ್ನು ತಡೆಗಟ್ಟುವುದು<br>ಈ ಎಲ್ಲಾ ಮೇಲಿನ ವಿಷಯಗಳ ಬಗ್ಗೆ ಚರ್ಚಿಸಿ, ಮುಂದಿನ ಸಭೆಯಲ್ಲಿ ಕ್ರಮವಹಿಸಲು ಸೂಚಿಸಲಾಯಿತು. | Trafic Police Departmrnt |

ಪ್ರಸ್ತುತ ಸಭೆಗೆ ಗೈರು ಹಾಜರಾಗಿರುವವರ ವಿರುದ್ಧ ನೋಟೀಸು ಜಾರಿ ಮಾಡಿ, ಮುಂದಿನ ಸಭೆಗೆ ಕಡ್ಡಾಯವಾಗಿ ನಿಗಧಿತ ಸಮಯದೊಳಗೆ ಹಾಜರಿರಲು ಹಾಗೂ ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ, ವಾರ್ಡ್ ಸಮಿತಿ ಕಾರ್ಯದರ್ಶಿರವರಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ತಿಳಿಸಿ ಕಾರ್ಯದರ್ಶಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿಗಳು

ಶ್ರೀ.ನರಸಿಂಹಯ್ಯ.ಎಸ್
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ50 ಬೆನ್ನಿಗಾನಹಳ್ಳಿ

ಅಧ್ಯಕ್ಷರು

ಶ್ರೀ.ರಾಮಾಂಜನೇಯ,
ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ದಕ್ಷಿಣ)
ಮತ್ತು ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ50 ಬೆನ್ನಿಗಾನಹಳ್ಳಿ

ಪ್ರತಿಯನ್ನು:-

1. ಶ್ರೀ.ರಾಮಾಂಜನೇಯ, ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ದಕ್ಷಿಣ)ಹಾಗೂ ನೋಡೆಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ50 ರವರ ಮಾಹಿತಿಗಾಗಿ ಕಳುಹಿಸಿದೆ.
2. ಕಾರ್ಯಪಾಲಕ ಅಭಿಯಂತರರು, ಸಿ.ವಿ.ರಾಮನ್‌ನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
3. ಮಾನ್ಯ ತಹಶೀಲ್ದಾರ್, ಕೆ.ಆರ್.ಪುರಂ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸುತ್ತಾ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
4. ಅಧೀಕ್ಷಕರು, ತೋಟಗಾರಿಕೆ ಇಲಾಖೆ(ಪೂರ್ವ) ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
5. ಆರೋಗ್ಯ ವೈದ್ಯಾಧಿಕಾರಿಗಳು(ಸಿ.ವಿ.ರಾಮನ್‌ನಗರ) ವಿಭಾಗ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.

6. ಆರಕ್ಷಕ ನಿರೀಕ್ಷಕರು, ಕಾನೂನು ಸುವ್ಯವಸ್ಥೆ, ಬೈಯ್ಯಪ್ಪನಹಳ್ಳಿ/ರಾಮೂರ್ತಿನಗರ/ಜೀವನ್‌ಭಿಮಾನಗರ/ ಇಂದಿರಾನಗರ, ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
7. ಆರಕ್ಷಕ ನಿರೀಕ್ಷಕರು(ಸಂಚಾರ ಪೋಲೀಸ್ ಠಾಣೆ) ಬಾಣಸವಾಡಿ/ರಾಮೂರ್ತಿನಗರ/ಜೀವನ್‌ಭಿಮಾನಗರ/ ಇಂದಿರಾನಗರ, ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಿ.ವಿ.ರಾಮನ್‌ನಗರ ಉಪ ವಿಭಾಗ/ಕಾಮಗಾರಿ ಇಲಾಖೆ/ಘನತ್ಯಾಜ್ಯ ನಿರ್ವಹಣೆ/ವಿದ್ಯುತ್/ಬಿಡಬ್ಲ್ಯೂಎಸ್‌ಎಸ್‌ಬಿ/ಬೆಸ್ಕಾಂ/ಬೃಹತ್ ನೀರುಗಾಲುವೆ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
9. ಸಹಾಯಕ ಕಂದಾಯ ಅಧಿಕಾರಿ, ಸಿ.ವಿ.ರಾಮನ್‌ನಗರ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
10. ಅರಣ್ಯಾಧಿಕಾರಿಗಳು, ಬಿ.ಬಿ.ಎಂ.ಪಿ ಅರಣ್ಯ ಇಲಾಖೆ, ಸಿ.ವಿ.ರಾಮನ್‌ನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
11. ಕಂದಾಯ ಪರಿವೀಕ್ಷಕರು ಮತ್ತು ಕಂದಾಯ ವಸೂಲಿಗಾರರು, ವಾರ್ಡ್ ಸಂಖ್ಯೆ50-ಬೆನ್ನಿಗಾನಹಳ್ಳಿ ರವರ ಮಾಹಿತಿಗಾಗಿ ಹಾಗೂ ಸಭೆಗೆ ಹಾಜರಾಗಲು ಕೋರಿದೆ
12. ವೈದ್ಯಾಧಿಕಾರಿಗಳು, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಹಳೇ ಬೈಯ್ಯಪ್ಪನಹಳ್ಳಿ ವಾರ್ಡ್ ಸಂಖ್ಯೆ50-ಬೆನ್ನಿಗಾನಹಳ್ಳಿ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
13. ಹಿರಿಯ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ50-ಬೆನ್ನಿಗಾನಹಳ್ಳಿ ರವರ ಮಾಹಿತಿಗಾಗಿ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
14. ಸ್ಥಳೀಯ ವಸತಿ ಕ್ಷೇಮಾಭಿವೃದ್ಧಿ ಸಂಘ(RWA) ರವರು ವಾರ್ಡ್ ಸಂಖ್ಯೆ50-ಬೆನ್ನಿಗಾನಹಳ್ಳಿ ರವರ ಮಾಹಿತಿಗಾಗಿ ಹಾಗೂ ಹಾಗೂ ಅನುಸರಣಾ ವರದಿಯನ್ನು ಸಲ್ಲಿಸಲು ಕಳುಹಿಸಿದೆ.
15. ಕಛೇರಿ ಕಡತಕ್ಕೆ